| ಕಾರ್ಯಕ್ರಮ | ಬಿ.ಎ. |
| --- | --- |
| ಸೆಮಿಸ್ಟರ್ | ತೃತೀಯ |
| ಪತ್ರಿಕೆ | ಕನ್ನಡ ಸೊಲ್ಲರಿಮೆ ಭಾಗ-1 |
| ವಿಷಯ | ಐಚ್ಛಿಕ ಕನ್ನಡ |
| ವಿಶ್ವವಿದ್ಯಾನಿಲಯ | ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ |
| ಅವಧಿ | 1 |

# ಹಿಂದಿನ ತರಗತಿಗಳ ಪುನರ್ ಮನನ

- ಕನ್ನಡ ಸೊಲ್ಲರಿಮೆ ಪರಂಪರೆ ಮತ್ತು ಸಂಸ್ಕøತ ವ್ಯಾಕರಣ ಪರಂಪರೆ ಇವುಗಳ ಪರಿಚಯ
- ಕನ್ನಡ ಸೊಲ್ಲರಿಮೆ ಮತ್ತು ಸಂಸ್ಕøತ ವ್ಯಾಕರಣ ನಿಯಮಗಳಿಗಿರುವ ವ್ಯತ್ಯಾಸದ ಅರಿವು
- ಆಡು ಭಾಷೆ ಮತ್ತು ಬರಹದ ಭಾಷೆಗಳಿಗಿರುವ ವ್ಯತ್ಯಾಸ
- ವ್ಯಾಕರಣದ ನಿಯಮಗಳನ್ನು ಕುರಿತಂತೆ ತಾವು ಕಲಿತಿರುವ ವಿಷಯಗಳನ್ನು ವಿದ್ಯಾರ್ಥಿಗಳು ಪುನರ್ ಮನನ ಮಾಡಿಕೊಳ್ಳುವರು

# ಕನ್ನಡ ಸೊಲ್ಲರಿಮೆಯ ಸ್ವರೂಪ

## ಘಟಕ-6

## ಸೊಲ್ಲರಿಮೆ ಎಂದರೇನು

## ಮತ್ತು

## ಸೊಲ್ಲರಿಮೆ ನಡೆದು ಬಂದ ದಾರಿ

# ಕಲಿಕೆಯ ಉದ್ದೇಶಗಳು

- ಸೊಲ್ಲರಿಮೆಯ ನಿಯಮಗಳ ಪ್ರಾಮುಖ್ಯತೆಯನ್ನು ತಿಳಿಯುವುದು
- ಭಾಷೆಗೆ ಒಂದು ವ್ಯವಸ್ಥಿತ ಚೌಕಟ್ಟನ್ನು ಒದಗಿಸಲು ವ್ಯಾಕರಣದ ನಿಯಮಗಳ ಅರಿವಿರಬೇಕು.
- ಪಾರಂಪರಿಕವಾದ ವ್ಯಾಕರಣ ಪದ್ಧತಿಯ ಲೋಪದೋಷಗಳು. ಕನ್ನಡಕ್ಕೆ ಅದರದೇ ಆದ ವ್ಯಾಕರಣದ ಅವಶ್ಯಕತೆ.
- ವ್ಯಾಕರಣ ಪರಂಪರೆ ನಡೆದು ಬಂದ ದಾರಿ ಹಾಗೂ ಕವಿ ಮತ್ತು ಕೃತಿಗಳ ಪರಿಚಯ.

# ಸೊಲ್ಲರಿಮೆ ಎಂದರೇನು?

- ನಾವು ಮಾತನಾಡುವ ಭಾಷೆಯ ಬಳಕೆಯ ಹಿಂದಿನ ನಿಯಮಗಳನ್ನು ತಿಳಿಸುವುದೇ ಸೊಲ್ಲರಿಮೆ
- ನಮ್ಮ ಭಾವನೆಗಳನ್ನು ಬೇರೆಯವರಿಗೆ ತಿಳಿಸಲು ಮತ್ತು ಅವರ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ಸೊಲ್ಲರಿಮೆಯ ನಿಯಮಗಳು ಅವಶ್ಯಕ.
- ಸೊಲ್ಲು ಎಂದರೆ ಮಾತು ಅಥವಾ ವಾಕ್ಯ ಎಂದರ್ಥ. ಸೊಲ್ಲುಗಳ ಒಳರಚನೆ ಹೇಗಿದೆ ಎಂದು ತಿಳಿಸುವುದೇ ಸೊಲ್ಲರಿಮೆ.
- ಕೇವಲ ಪದಗಳಿಂದ ಸೊಲ್ಲುಗಳಾಗುವುದಿಲ್ಲ. ಪ್ರತ್ಯಯಗಳು ಅರ್ಥವತ್ತಾಗಿ ಬೆಸದಿರಬೇಕು.

- ಭಾರತೀಯರಿಗೆ ಸೊಲ್ಲರಿಮೆಯು ಪ್ರಮುಖ ಜ್ಞಾನ ಸಾಧನ. ಸರ್ವ ವಿದ್ಯೆಗಳಿಗೂ ವ್ಯಾಕರಣವೇ ಮೂಲ
- ವ್ಯಾಕರಣ ಶಾಸ್ತ್ರವನ್ನು ವ್ಯಾಕೃತಿ, ಶಬ್ದವಿದ್ಯೆ, ಶಬ್ದಶಾಸನ,ಶಬ್ದಶಾಸ್ತ್ರಎಂದು ಕರೆದಿದ್ದಾರೆ.
- ಇಂಗ್ಲೀಷಿನಲ್ಲಿ ವ್ಯಾಕರಣಕ್ಕೆ "ಗ್ರಾಮರ್" ಎಂಬ ಪದ ಬಳಸುತ್ತೇವೆ. ಇದು ಗ್ರೀಕಿನ "ಗ್ರಾಮಾಟಿಕ (ಬರವಣಿಗೆಯ ಕಲೆ)" ಎಂಬ ಪದದಿಂದ ಬಂದಿದೆ
- ಸಂಸ್ಕøತದ ವ್ಯಾಕರಣ ಎಂಬ ಪರಿಭಾಷೆಗೆ ಕನ್ನಡದಲ್ಲಿ 'ಸೊಲ್ಲರಿಮೆ' ಎಂಬ ಪದವನ್ನು ಬಳಸುತ್ತಿದ್ದೇವೆ.

- ಪ್ರಾಚೀನ ಸೊಲ್ಲರಿಗರು ಸಂಸ್ಕೃತ ವ್ಯಾಕರಣ ನಿಯಮಗಳನ್ನು ಅನ್ವಯಿಸಿ ಕನ್ನಡ ಸೊಲ್ಲರಿಮೆಯನ್ನು ರಚಿಸಿದ್ದಾರೆ.
- ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತದಲ್ಲಿ ಸಾಂಪ್ರದಾಯಿಕ ಮಾದರಿಯ ಕನ್ನಡ ವ್ಯಾಕರಣ ಪರಂಪರೆಯನ್ನು ಕಲಿಸಲಾಗುತ್ತಿದೆ.
- ವಿಷಯಗಳ ವರ್ಗೀಕರಣ , ಪಾರಿಭಾಷಿಕ ಪದಗಳ ಬಳಕೆ, ಸೂತ್ರಗಳ ರಚನೆ, ಮೊದಲಾದವುಗಳಲ್ಲಿ ಸಂಸ್ಕೃತ ಭಾಷೆಯ ಅನುಕರಣೆಯೇ ನಡೆದಿದೆ
- ಕನ್ನಡ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ್ದೇ ಹೊರತು ಸಂಸ್ಕೃತ ಭಾಷೆಯ ಉಪಭಾಷೆ ಅಲ್ಲ.

- ಆದುದರಿಂದ ಕನ್ನಡ ಭಾಷಾ ವ್ಯಾಕರಣ ನಿಯಮಗಳು ಮತ್ತು ಸಂಸ್ಕøತ ಭಾಷಾ ವ್ಯಾಕರಣ ನಿಯಮಗಳು ಭಿನ್ನ.
- ಕೇಶೀರಾಜನು ತನ್ನ ಕೃತಿಯಲ್ಲಿ ಕನ್ನಡದ ವೈಶಿಷ್ಟ್ಯಗಳ ಬಗ್ಗೆ ಮಾತನಾಡಿದರೂ ಸಂಸ್ಕøತವನ್ನು ಬಿಡಲು ಸಾಧ್ಯವಾಗಲಿಲ್ಲ.

- ಹತ್ತೊಂಬತ್ತನೆಯ ಶತಮಾನದಿಂದೀಚೆಗೆ ಬಂದ ಕ್ರಿಶ್ಚಿಯನ್ ಮಿಶನರಿಗಳು ಲ್ಯಾಟಿನ್, ಇಂಗ್ಲೀಷ್ ಸೊಲ್ಲರಿಮೆಯ ಪರಂಪರೆಗಳನ್ನು ಪರಿಚಯಿಸಿದವು.
- ಆದರೆ ಕನ್ನಡ ಸೊಲ್ಲರಿಮೆಯ ಸ್ವರೂಪವನ್ನು ಕಂಡುಕೊಳ್ಳುವಲ್ಲಿ ಇದುವರೆಗಿನ ಎಲ್ಲ ಪ್ರಯತ್ನಗಳು ಸಫಲವಾಗಲಿಲ್ಲ.
- ನಮ್ಮ ಆಧುನಿಕ ಭಾಷಾ ತಜ್ಞರು ಅಥವಾ ನುಡಿಯರಿಗರು ‘ಸೊಲ್ಲರಿಮೆಯ ಸ್ವರೂಪ ನಿರ್ಧರಿಸುವಲ್ಲಿ ಮಹತ್ವದ ಹೆಜ್ಜೆಯನ್ನು ಇರಿಸಿದ್ದಾರೆ.

# ಕನ್ನಡ ಸೊಲ್ಲರಿಮೆ ನಡೆದು ಬಂದ ದಾರಿ

- ಕನ್ನಡ ಸೊಲ್ಲರಿಮೆಯ ಪರಂಪರೆಗೆ ಒಂದು ಸಾವಿರ ವರ್ಷಗಳ ಇತಿಹಾಸವಿದೆ.
- ‘ಕವಿರಾಜಮಾರ್ಗ’ದಲ್ಲಿ ಸೊಲ್ಲರಿಮೆಯ ವಿಚಾರಗಳು ದೊರೆಯುತ್ತವೆ.
- ಕವಿರಾಜ ಮಾರ್ಗಕ್ಕೂ ಮುಂಚೆ ಕನ್ನಡ ವ್ಯಾಕರಣ ಗ್ರಂಥ ರಚಿತವಾಗಿತ್ತೆಂದು ಹೇಳಲೂ ಯಾವುದೇ ಆಧಾರ ದೊರೆಯುವುದಿಲ್ಲ.
- ಕನ್ನಡ ವ್ಯಾಕರಣ ಪರಂಪರೆ ಪ್ರಾರಂಭ ಎರಡನೆಯ ನಾಗವರ್ಮನ ‘ಶಬ್ಧ ಸ್ಮೃತಿ’ ಮತ್ತು ಕನ್ನಡ ಭಾಷಾ ಭೂಷಣ ಎಂಬ ಕೃತಿಗಳಿಂದ.

- ಜನ್ನನು ತನ್ನ ಅನಂತನಾಥ ಪುರಾಣದಲ್ಲಿ "ರನ್ನಂ ವೈಯಾಕರಣಂ" ಎಂದು ಹೇಳಿದ್ದರೂ ಇದು ಸಾಹಸ ಭೀಮ ವಿಜಯ ಕೃತಿ ರಚಿಸಿದ ರನ್ನನೇ ಎಂಬ ಬಗ್ಗೆ ಖಚಿತ ಅಭಿಪ್ರಾಯಗಳಿಲ್ಲ.
- ಎರಡನೆಯ ನಾಗವರ್ಮನು ತನ್ನ ಕರ್ನಾಟಕ ಭಾಷಾಭೂಷಣದಲ್ಲಿ "ದೀರ್ಘೋಕ್ತಿಯಸೇನಸ್ಯ" ಎಂದು ಹೇಳಿರುವಲ್ಲಿ ನಯಸೇನ ಕನ್ನಡ ವ್ಯಾಕರಣವನ್ನು ಬರೆದಿರಬಹುದು ಆದರೆ ಅದು ನಷ್ಟವಾಗಿದೆ ಎಂದಿದ್ದಾರೆ

- ಈಗ ಲಭ್ಯವಿರುವ ಕನ್ನಡ ಸೊಲ್ಲರಿಮೆಯ ಗ್ರಂಥಗಳೆಂದರೆ ಎರಡನೇ ನಾಗವರ್ಮನ 'ಶಬ್ದಸ್ಮøತಿ'. ಆದರೆ ಇದು ಪೂರ್ಣ ಗ್ರಂಥವಲ್ಲ. ಕಾವ್ಯಾವಲೋಕನದ ಮೊದಲ ಅಧ್ಯಾಯ.
- ಆದರೆ ಇದು ಪ್ರಾಸಂಗಿಕವಾಗಿ ವ್ಯಾಕರಣ ವಿಚಾರಗಳನ್ನು ನಿರೂಪಿಸುವುದಕ್ಕೆ ಸೀಮಿತವಾಗದೆ ಸಂಗ್ರಹವಾದರೂ ಇಡಿಯಾಗಿ ಕನ್ನಡ ವ್ಯಾಕರಣವನ್ನು ನಿರೂಪಿಸುವುದರಿಂದ ಸ್ವತಂತ್ರ ಕೃತಿಯಾಗಬಹುದು.
- ಕನ್ನಡದಲ್ಲೇ ರಚಿತವಾದ ಮೊಟ್ಟಮೊದಲ ವ್ಯಾಕರಣ ಎಂಬ ಹೆಗ್ಗಳಿಕೆ

• ಇದರ ನಂತರದ್ದು ಎರಡನೆಯ ನಾಗವರ್ಮನ 'ಕರ್ಣಾಟಕ ಭಾಷಾಭೂಷಣ'. ಕನ್ನಡ ವ್ಯಾಕರಣದ ಮೊಟ್ಟ ಮೊದಲ ಸಮಗ್ರ ಕೃತಿ. ಸಂಸ್ಕøತದಲ್ಲಿ ರಚನೆಯಾಗಿದೆ.

• ಮುಂದಿನ ಗ್ರಂಥ ಕೇಶೀರಾಜನ 'ಶಬ್ಧಮಣಿ ದರ್ಪಣ'(ಸುಮಾರು ಕ್ರಿ.ಶ.1250). ಕನ್ನಡ ಅತ್ಯಂತ ಪ್ರಸಿದ್ಧ ವ್ಯಾಕರಣ ಕೃತಿ. ಇದಕ್ಕೆ ಕಾರಣ ಇದರ ವ್ಯಾಪಕತೆ, ಸಮಗ್ರತೆ.

• ಕನ್ನಡದ ಮೊದಲ ಸೊಲ್ಲರಿಮೆಯ ಕೃತಿ. ಕೇಶಿರಾಜ ತನ್ನ ಹಿಂದಿನ ವಿಚಾರಗಳನ್ನು ಸಂಸ್ಕøತದ ವಿಚಾರಗಳನ್ನು ಸವìಗ್ರವಾಗಿ ಅಧ್ಯಯನ ನಡೆಸಿ ಕನ್ನಡ ವ್ಯಾಕರಣವನ್ನು ರಚಿಸಿದ್ದಾನೆ.

- ಭಟ್ಟಾಕಳಂಕನ ‘ಶಬ್ದಾನುಶಾಸನ(ಕ್ರಿ.ಶ. 1604). ನಾಗವರ್ಮನ ಕೃತಿಯಂತೆಯೇ ಸಂಸ್ಕøತದಲ್ಲಿ ರಚನೆಯಾದ ಪ್ರೌಢವ್ಯಾಕರಣ. ಶಾಸ್ತ್ರಶುದ್ಧತೆ, ಖಚಿತತೆಯಿಂದ ಕೂಡಿದ್ದರೂ ಜನಸಾಮಾನ್ಯರಿಂದ ದೂರವಾಯಿತು.
- ಸಂಸ್ಕøತದಲ್ಲಿ ಪಾಣಿನಿ, ಕಾತ್ಯಾಯನ, ಪತಂಜಲಿ ಈ ಮೂವರು ಸೊಲ್ಲರಿಮೆ ಪರಂಪರೆಯ ತ್ರಿಮೂರ್ತಿಗಳು.

# ಸಾರಾಂಶ

- ಭಾಷೆಯ ಬಳಕೆಯ ಹಿಂದಿರುವ ನಿಯಮಗಳನ್ನು ತಿಳಿಸುವುದೇ ಸೊಲ್ಲರಿಮೆ. ಸೊಲ್ಲು ಎಂದರೆ ಮಾತು ಮತ್ತು ವಾಕ್ಯ ಎಂದರ್ಥ. ಸೊಲ್ಲರಿಮೆ ಎಂದರೆ ವ್ಯಾಕರಣ.
- ಕನ್ನಡಕ್ಕೂ ತನ್ನದೆ ಆದ ವ್ಯಾಕರಣ ನಿಯಮದ ಅವಶ್ಯಕತೆಯಿದೆ. ಕನ್ನಡ ವ್ಯಾಕರಣ ಪರಂಪರೆಗೆ ಒಂದು ಸಾವಿರ ವರ್ಷಗಳ ಇತಿಹಾಸವಿದೆ.
- ಕವಿರಾಜಮಾರ್ಗದಿಂದ ಪ್ರಾರಂಭವಾದ ಕನ್ನಡ ವ್ಯಾಕರಣ ಪರಂಪರೆ ಕನ್ನಡ ಸೊಲ್ಲರಿಮೆಯಾಗಿ ನುಡಿಯರಿಗರ ಅಧ್ಯಯನ ವಸ್ತುವಾಗಿದೆ.

1. ಸೊಲ್ಲರಿಮೆ ಎಂದರೆ

ಅ) ಪದ
ಆ) ಪ್ರತ್ಯಯ
ಇ) ವಾಕ್ಯ
ಈ) ವ್ಯಾಕರಣ

ಉತ್ತರ: ಈ ವ್ಯಾಕರಣ

2. ಗ್ರಾಮಾಟಿಕ ಎಂಬ ಪದವು ----- ಭಾಷೆಯಿಂದ ಬಂದಿದೆ

ಅ) ಗ್ರೀಕ್

ಆ) ಲ್ಯಾಟಿನ್

ಇ) ಪ್ರೆಂಚ್

ಈ) ಇಂಗ್ಲೀಷ್

ಉತ್ತರ: ಅ) ಗ್ರೀಕ್

3. ಕನ್ನಡಲ್ಲೇ ರಚಿತವಾದ ಮೊಟ್ಟಮೊದಲ ವ್ಯಾಕರಣ ಗ್ರಂಥ

ಅ) ಕರ್ನಾಟಕ ಭಾಷಾಭೂಷಣ

ಆ) ಶಬ್ಧಸ್ಮೃತಿ

ಇ)ಶಬ್ಧಮಣಿ ದರ್ಪಣ

ಈ) ಶಬ್ದಾನುಶಾಸನ

ಉತ್ತರ: ಆ) ಶಬ್ಧಸ್ಮೃøತಿ

4. ಸಂಸ್ಕೃತ ಸೊಲ್ಲರಿಮೆ ಪರಂಪರೆಯ ತ್ರಿಮೂರ್ತಿಗಳು

ಅ) ಪಾಣಿನಿ, ನಾಗಮರ್ವ, ಪತಂಜಲಿ
ಆ) ಪತಂಜಲಿ, ನಾಗಮರ್ವ, ಸುಮನೋಬಾಣ
ಇ) ಪಾಣಿನಿ, ಕಾತ್ಯಾಯನ, ಪತಂಜಲಿ
ಈ) ಕಾತ್ಯಾಯನ, ಪಾಣಿನಿ, ಸುಮನೋಬಾಣ.

ಉತ್ತರ: ಇ) ಪಾಣಿನಿ, ಕಾತ್ಯಾಯನ, ಪತಂಜಲಿ

4. ಸೊಲ್ಲುಗಳು ಇವುಗಳಿಂದ ಕೂಡಿರುತ್ತದೆ.

ಅ) ಪದಗಳು

ಆ) ಪ್ರತ್ಯಯಗಳು

ಇ) ಮಾತು

ಈ) ಪದಗಳು ಮತ್ತು ಪ್ರತ್ಯಯಗಳು

ಉತ್ತರ: ಈ) ಪದಗಳು ಮತ್ತು ಪ್ರತ್ಯಯಗಳು